# ಕೆನರಾ ವೆಲ್‌ಫೇರ್ ಟ್ರಸ್ಟ್, ಅಂಕೋಲಾ

ಮತ್ತು

ಶ್ರೀ ಭಗವದ್ಗೀತಾ ಅಭಿಯಾನ
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ

# ಶ್ರೀ ಭಗವದ್ಗೀತಾ ಅಭಿಯಾನ ಸಮಿತಿ, ಅಂಕೋಲಾ

ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ



# ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ
# ಸಂಸ್ಕೃತ ಸೌರಭ ಕಾರ್ಯಕ್ರಮ

ದಿನಾಂಕ: **6ನೇ ಡಿಸೆಂಬರ್ 2013** ಸಮಯ: **10.00 ರಿಂದ 2.00**

ಸ್ಥಳ: **ಪಿ. ಎಮ್. ಜ್ಯೂನಿಯರ್ ಕಾಲೇಜ್, ಅಂಕೋಲಾ (ಉ.ಕ.)**

## ಒಂದು ವರದಿ

# ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ಸಂಸ್ಕೃತ ಸೌರಭ ಕಾರ್ಯಕ್ರಮ







ಶ್ರೀಮದ್ಭಗವದ್ಗೀತೆಯು ಮನುಷ್ಯನ ಹೃದಯವನ್ನು ಸಂಸ್ಕರಿಸಿ ಅವನನ್ನು ಹೊಸ ಬೆಳಕಿನ ಕಡೆಗೆಒಯ್ಯುತ್ತದೆ ಎಂದು ಸ್ವಾಮಿ ಅಂಬಿಕಾನಂದಪುರಿ ಮಹಾರಾಜ್ ಅವರು ಹೇಳಿದ್ದಾರೆ. ಅವರು ಕಳೆದ ದಿನಾಂಕ 06–12–2013 ರಂದು ಕೆನರಾ ವೆಲ್‌ಫೇರ್ ಟ್ರಸ್ಟ್ ಹಾಗೂ ಭಗವದ್ಗೀತಾ ಅಭಿಯಾನ ಸಮಿತಿ, ಅಂಕೋಲಾ ಇವುಗಳ ಸಂಯುಕ್ತ ಆಶ್ರಯದಲ್ಲಿ ಪಿ.ಎಂ.ಜ್ಯೂನಿಯರ್ ಕಾಲೇಜಿನಲ್ಲಿ ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ನಡೆದ **'ಸಂಸ್ಕೃತ ಸೌರಭ ಹಾಗೂ ಭಗವದ್ಗೀತಾ ಸ್ಪರ್ಧೆ'** ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.





ಉಪನ್ಯಾಸಕರಾಗಿ ಆಗಮಿಸಿದ್ದ ಶಿರಸಿಯ ಅಧ್ಯಾತ್ಮ ಚಿಂತಕರಾದ ನಾರಾಯಣ ಹೆಗಡೆ ಗಡಿಕೈ ಅವರು, ಇಂದಿನ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಲು ಭಗವದ್ಗೀತೆಯು ಸಹಕಾರಿಯಾಗಬಲ್ಲುದೆಂದು ಅಭಿಪ್ರಾಯಪಟ್ಟರು. ಅಧ್ಯಕ್ಷತೆ ವಹಿಸಿದ್ದ ಕೆನರಾ ವೆಲ್‌ಫೇರ್ ಟ್ರಸ್ಟಿನ ಆಡಳಿತಾಧಿಕಾರಿಗಳಾದ ಕೃಷ್ಣಾನಂದ ವಿ.ಶೆಟ್ಟಿಯವರು ದಿ. ಗಣಪತಿ ಅಣ್ಣಪ್ಪಯ್ಯ ಪೈ ಹಾಗೂ ಟ್ರಸ್ಟಿನ ಸಂಬಂಧವನ್ನು ವಿವರಿಸಿ, ಸಂಸ್ಕೃತ ಭಾಷೆಯು ಬಲು ಸುಂದರವಾಗಿದ್ದು ಅದರ ಸರಿಯಾದ ಉಚ್ಚಾರಣೆಯನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕೆಂದು ಸಲಹೆ ಮಾಡಿದರು.







ಅಂಕೋಲಾ ತಾಲೂಕಾ ಭಗವದ್ಗೀತಾ ಅಭಿಯಾನ ಸಮಿತಿಯ ಅಧ್ಯಕ್ಷ ಎಂ. ಪಿ. ಭಟ್ಟ ಅವರು ಸ್ವಾಗತಿಸಿದರು. ಉಪಾಧ್ಯಕ್ಷ ರವೀಂದ್ರ ವಿ.ಕೇಣಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಮಿತಿಯ ಕಾರ್ಯದರ್ಶಿ ನಾಗಪತಿ ಹೆಗಡೆ ಪ್ರಾಸ್ತಾವಿಕ

ನುಡಿಗಳನ್ನಾಡಿದರು. ಪಿ.ಎಂ. ಜ್ಯೂನಿಯರ್ ಕಾಲೇಜಿನ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಉಪನ್ಯಾಸಕ ಉಲ್ಲಾಸ ಹುದ್ದಾರ ನಿರ್ವಹಿಸಿದರು. ಕೆನರಾ ವೆಲ್‌ಫೇರ್ ಟ್ರಸ್ಟಿನ ಸಂಚಾಲಕರು ಮತ್ತು ಕಾರ್ಯಕ್ರಮ ಸಂಯೋಜಕರಾದ ಪ್ರಶಾಂತ ರಾವ್, ರಾಜು ನಾಯ್ಕ ಹಾಗೂ ಮೀನಾಕ್ಷಿ ನಾಯ್ಕ ಸಹಕರಿಸಿದರು.

ನಂತರ ನಡೆದ ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ಪ್ರಾಥಮಿಕ ವಿಭಾಗದಲ್ಲಿ 19 ವಿದ್ಯಾರ್ಥಿಗಳು ಭಾಗವಹಿಸಿದ್ದರು. ರಂಜಿತಾ ಪಿ. ಕೋಟೆಮನೆ ಪ್ರಥಮ, ಸ್ವಸ್ತಿಕ್ ಎಂ.ವೈದ್ಯ ದ್ವಿತೀಯ ಹಾಗೂ ನಿಸರ್ಗಾ ಆರ್.ಭಟ್ಟ ತೃತೀಯ ಸ್ಥಾನ ಗಳಿಸಿಕೊಂಡರು. ಪ್ರೌಢಶಾಲಾ ವಿಭಾಗದಲ್ಲಿ 22 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸುಹಾಸಿನಿ ಎಸ್. ಗಾಂವಕರ ಕಲ್ಲೇಶ್ವರ ಪ್ರಥಮ, ಮೇಘನಾ ಶ್ರೀಕಾಂತ ಆಚಾರಿ ಅಂಕೋಲಾ ದ್ವಿತೀಯ, ಅರ್ಚನಾ ಮಂಗೇಶ ಆಗೇರತೃತೀಯ ಬಹುಮಾನ ಗಳಿಸಿಕೊಂಡರು. ಪ್ರೌಢಶಾಲಾ ವಿಭಾಗದ ಭಾಷಣ ಸ್ಪರ್ಧೆಯಲ್ಲಿ 8 ವಿದ್ಯಾರ್ಥಿಗಳು ಭಾಗವಹಿಸಿ, ದೀಪಾ ಅಮಾಸ್ಯಗೌಡ ಅಂಕೋಲಾ ಪ್ರಥಮ, ಸ್ಮಿತಾ ಕಮಲಾಕರ ನಾಯ್ಕ ಬೊಬ್ರವಾಡ ದ್ವಿತೀಯ, ಸ್ನೇಹಾ ಈಶ್ವರ ಹರಿಕಾಂತ ತೃತೀಯ ಬಹುಮಾನ ಗಳಿಸಿಕೊಂಡರು. ಪದವಿ ಪೂರ್ವ ಕಾಲೇಜು ವಿಭಾಗದಲ್ಲಿ 6 ವಿದ್ಯಾರ್ಥಿಗಳು ಭಾಗವಹಿಸಿ, ವಿನಂತಿ ಎಸ್. ನಾಯ್ಕ, ಅಂಕೋಲಾ ಪ್ರಥಮ, ಸಿಂಚನಾ ಆರ್.ನಾಯಕ ದ್ವಿತೀಯ ಹಾಗೂ ಸಂಜಯ ವಿಜಯ ನಾಯಕ ತೃತೀಯ ಬಹುಮಾನ ಗಳಿಸಿಕೊಂಡರು. ಈ ಮೇಲಿನ ಎಲ್ಲ ಸ್ಪರ್ಧೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಬಹುಮಾನ ವಿಜೇತರು ದಿನಾಂಕ 14–12–2013ರಂದು ಶಿರಸಿಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಅರ್ಹತೆ ಪಡೆದಿರುತ್ತಾರೆ.














